

# ಮುಗ್ಧ ಮಗು ಮತ್ತು ಖುಷಿಯ ನಗು

**ಸಣ್ಣ ಸಣ್ಣ ಬಯಕೆಗಳಲ್ಲಿಯೇ ಬದುಕಿನ ಸೌಂದರ್ಯ ಇರುವುದು ಎಂಬುದನ್ನು ಹೇಳುತ್ತಲೇ ನೋಡುಗರ ಮುಖದಲ್ಲಿ ಮುಗ್ಧ ಮಂದಹಾಸವನ್ನು ಅರಳಿಸುವ ಕಿರುಚಿತ್ರವಿದು.**

■ ಗೌರಿ

ಬದುಕಿನ ಸೌಂದರ್ಯ ಮನಗಾಣಲು ಕಾಡಿನೊಳಗೆ ಹೋಗಿ ಕೂತು ತಪಸ್ಸು ಮಾಡಬೇಕಿಲ್ಲ. ವರ್ಷಗಟ್ಟಲೆ ಜ್ಞಾನಸಂಪಾದನೆ ಮಾಡಿ ಪಂಡಿತರಾಗಬೇಕಿಲ್ಲ. ಅದು ಎಲ್ಲೋ ನಮಗೆ ಕೈಗೆಟುಕದ ಜಾಗದಲ್ಲಿ ಇರುವಂಥದ್ದಲ್ಲ; ಬದಲಿಗೆ ದಿನದಿನದ ದಿನಚರಿಗಳಲ್ಲಿಯೇ, ನಮ್ಮ ಸುತ್ತಮುತ್ತಲೇ ನಮ್ಮ ಬದುಕಿನ ವೃಕ್ಷದ ಕೊಂಬೆ ತುದಿಯಲ್ಲಿಯೇ ಅದರ ಸಾರ್ಥಕತೆಯ ಹೂಗಳೂ ಅರಳಿರುತ್ತವೆ. ಆದರೆ ಬಹಳ ಸಲ ಅದನ್ನು ಗಮನಿಸುವ, ಆಸ್ವಾದಿಸುವ, ಅದು ನಮ್ಮಲ್ಲಿ ಉಕ್ಕಿಸುವ ಅಂತಃಕರಣಕ್ಕೆ ಎರವಾಗುವ ವ್ಯವಧಾನವನ್ನು ನಾವು ಉಳಿಸಿಕೊಂಡಿರುವುದಿಲ್ಲವಷ್ಟೆ. ಅದಕ್ಕಾಗಿಯೇ ಅಲ್ಲವೇ ಬೇಂದ್ರೆಯಜ್ಜ ಕವಿಸ್ಫೂರ್ತಿಗೆ ಮಹಾ ದೊಡ್ಡ ಸಂಗತಿಯೇನೂ ಬೇಕಾಗಿಲ್ಲ 'ಹೂತ ಹುಣಸಿ ಮರ ಸಾಕು' ಎಂದು ಹೇಳಿದ್ದು?

ಮಗುವಿನ ಕಣ್ಣಿಗೆ ಕಂಡಿದ್ದೆಲ್ಲ ಬೆರಗು, ಬಯಸಿದ ಸಣ್ಣ ಸಂಗತಿ ಕೈಗೂಡಿದರೂ ಸಾಕು, ಅದೇ ದೊಡ್ಡ ಸಂತೋಷದ ಬುಗ್ಗೆ. ಆದರೆ ಬೆಳೆಯುತ್ತ ಹೋದಹಾಗೆ ಆ ಖುಷಿಯ ಒರತೆ ಯಾವಾಗ, ಹೇಗೆ, ಯಾವ ಬಿರುಬಿಸಿಲಿಗೆ ಸಿಕ್ಕು ಒಣಗಿಹೋಗುತ್ತದೆ? ಅದು ಹೇಗೆ ನಾವು ಜಗದ ಭಾರವನ್ನೆಲ್ಲ ಹೊತ್ತುಕೊಂಡು ಸಂಕಟಗಳನ್ನೇ ಬಯಸುವವರ ಹಾಗೆ ದಣಿವನ್ನೇ ಉಂಡು ಬದುಕಲು ಶುರುಮಾಡುತ್ತೇವೆ? ಒಂದು ನಿಷ್ಕಲ್ಮಷ ನಗು, ಸಣ್ಣದೊಂದು ಖುಷಿಗೆ ಅರಳುವ ಮನಸನ್ನು ಎಲ್ಲಿ ಕಳೆದುಕೊಂಡುಬಿಡುತ್ತೇವೆ?

ಈ ಎಲ್ಲ ಪ್ರಶ್ನೆಗಳನ್ನು ತನ್ನ ಮುಗ್ಧತೆಯ ಕಾರಣದಿಂದಲೇ ಎತ್ತುವ ಕಿರುಚಿತ್ರ 'ಮಿಲ್ಕ್ ಆಂಡ್ ಕುಕ್ಕೀಸ್'. ಈ ಹೆಸರಲ್ಲಿಯೇ ಒಂದು ಮಗುತನವಿದೆ ನೋಡಿ. ಹಾಲಿನಲ್ಲಿ ಬಿಸ್ಕತ್ತನ್ನು ಅದ್ದಿತಿನ್ನುವ ನೆನಪು ನಮ್ಮೆಲ್ಲರ ಬಾಲ್ಯದ ಭಾಗವೂ ಹೌದಲ್ಲವೇ? ಈ ಕಿರುಚಿತ್ರದಲ್ಲಿನ ಪುಟಾಣಿಯ ಆಸೆಯೂ ಅದೇ. ಹಾಲು ಬಿಸ್ಕತ್ ಎಂದರೆ ಅವಳಿಗೆ ಪಂಚಪ್ರಾಣ. ಆದರೆ ಅಮ್ಮ ಯಾವ್ಯಾವುದೋ ಕಾರಣ ನೀಡಿ ಅದನ್ನು ಕೊಡುತ್ತಿರುವುದಿಲ್ಲ. ಕೊನೆಗೆ ರಾತ್ರಿಯ ಹೊತ್ತು ಅಮ್ಮ ಮಲಗಿದ ಮೇಲೆ ನಿದ್ದೆಗಣ್ಣಲ್ಲಿನ ಅವಳೆದುರು ನಿಂತು 'ಅಮ್ಮಾ ಹಾಲು ಬಿಸ್ಕತ್ ತಿನ್ನಲಾ? ಎಂದು ಕೇಳಿ ಅನುಮತಿ ಪಡೆದುಕೊಂಡು ಹೋಗಿ ತಿನ್ನುತ್ತಾಳೆ. ಬಿಸ್ಕತ್ತನ್ನು ಹಾಲಿನಲ್ಲಿ ಅರ್ಧ ಅದ್ದಿ ಅದನ್ನು ಬಾಯಲ್ಲಿಟ್ಟು ಬಗೆಬಗೆಯಲ್ಲಿ ಅಗೆಯುತ್ತಿರುವಾಗ ಅವಳ ಮುಖದಲ್ಲಿ ಅರಳುವ ಖುಷಿಯ ಬೆಳಕಿದೆಯಲ್ಲ, ಅದನ್ನು ಸರಿಗಟ್ಟಬಲ್ಲ ಸಂತೃಪ್ತಿ ಬಹುಶಃ ಬದುಕಿನ ಯಾವ ಸಂಗತಿಗಳಲ್ಲಿಯೂ ಇಲ್ಲವೇನೋ.




ಹೆಸರು: ಮಿಲ್ಕ್ ಆಂಡ್ ಕುಕ್ಕೀಸ್ (ಅಮೆರಿಕ)
ನಿರ್ದೇಶನ: ಪ್ಯಾಟ್ರಿಕ್ ಮುಲ್ವೆಯ್ ಮತ್ತು ಆಂಡ್ರ್ಯೂ ಸ್ಕೋಟ್ ರಮ್‌ಸೇ
ನಿರ್ಮಾಣ: 5ಬೈ 12 ಪ್ರೊಡಕ್ಷನ್ಸ್
ತಾರಾಗಣ: ಗ್ರೇಸ್ ವರ್ಥಿಂಟನ್, ಮಾರಿಕಾ
ಸಂಕಲನ: ಸ್ಕಾಟ್ ಥಾಮಸ್

ಮೇಲ್ನೋಟಕ್ಕೆ ತುಂಬ ಸರಳ, ಮುಗ್ಧ ಅನಿಸುವ ಈ ಕಥಾನಕದ ಸೆರಗಿಗೆ ಬೇರೆ ಬೇರೆ ಮಡಿಕೆಗಳೂ ಇವೆ. ವಿಚಿತ್ರ ನೋಡಿ, ಮಗುವಿನ ದೈಹಿಕ ಆರೋಗ್ಯ ಹಾಳಾಗಬಾರದು ಎಂಬ ಕಾರಣಕ್ಕೆ ನಾವು ಚಾಕೊಲೇಟ್ ಕೊಡುವುದಿಲ್ಲ, ಬಿಸ್ಕತ್ ಅತಿಯಾಗಿ ತಿನ್ನಲು ಬಿಡುವುದಿಲ್ಲ. ಐಸ್‌ಕ್ರೀಮ್ ತಿನ್ನುವ ಅವರ ಆಸೆಗೆ ಬಹಳ ಸಲ ನೀರೆರೆಚುತ್ತಲೇ ಇರುತ್ತೇವೆ. ಆದರೆ ಅದೇ ಮಗುವಿನ ಮನಸ್ಸಿನ ಆರೋಗ್ಯ ಹೇಗಿದೆ ಎಂಬುದರ ಬಗ್ಗೆ ಯೋಚಿಸುವುದೇ ಇಲ್ಲ. ಚಿತ್ರದಲ್ಲಿನ ತಾಯಿ ಯಾವತ್ತೂ ಮೊಬೈಲಲ್ಲಿ ಮಾತಾಡುತ್ತ, ಇಲ್ಲವೇ ಚಾಟ್ ಮಾಡುತ್ತಲೇ ಇರುವಾಕೆ. ತನ್ನ ಕಡೆಗೆ ಆಸೆಗಣ್ಣಿನಿಂದ ನೋಡುತ್ತ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಎಸೆಯುತ್ತ ಕೂತಿರುವ ಪುಟಾಣಿಯ ಕಡೆಗೆ ಲಕ್ಷ್ಯವಹಿಸಲೂ ಅವಳಿಗೆ ಪುರಸೊತ್ತಿಲ್ಲ. ಎಲ್ಲೋ ಇರುವ ಅಪ್ಪ ಟ್ಯಾಬ್‌ನಲ್ಲಿ ಮುಖ ಕಾಣಿಸಿ ಮಾತಾಡಿ ಮಾಯವಾಗುತ್ತಾನೆ. ಹೀಗಿರುವಾಗ ಮಗು ದೈಹಿಕವಾಗಿ ಎಷ್ಟೇ ಸುಪುಷ್ಟವಾಗಿದ್ದರೂ ಮಾನಸಿಕವಾಗಿ ಸೊರಗುತ್ತಿರುವುದು ಅವರಿಗೆ ಕಾಣಿಸುತ್ತಿದೆಯೇ? ಈ ಪ್ರಶ್ನೆಯನ್ನೂ ಮುಗ್ಧತೆಯ ಮಂದಹಾಸದಲ್ಲಿಯೇ ನಮ್ಮತ್ತ ಎಸೆಯುತ್ತದೆ ಈ ಕಿರುಚಿತ್ರ.

ಇನ್ನು ಈ ಚಿತ್ರದಲ್ಲಿ ಕಾಣಿಸಿಕೊಂಡ ಪುಟಾಣಿಯ ಮುದ್ದು ಮುದ್ದೆನಿಸುವ ನಟನೆಯನ್ನು ನೋಡಿಯೇ ಸವಿಯಬೇಕು.

ಈ ಕಿರುಚಿತ್ರ ವೀಕ್ಷಣೆಗೆ bit.ly/3exsLP4 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.